
# ಎಮ್ಮೆ ಯಾರದ್ದು?

■ ಮುರಲೀಧರ ಕುಲಕರ್ಣಿ
ಕಲೆ: ಸಂತೋಷ್ ಸಸಿಹಿತ್ಲು



ಹಿಂದಿಯಲ್ಲಿ ಒಂದು ಗಾದೆ ಮಾತಿದೆ. 'ಜಿಸಕಿ ಲಾಠಿ ಉಸಕಿ ಭೈಂಸ್', 'ದೊಣ್ಣೆ ಯಾರದೊ ಎಮ್ಮೆ ಅವರದು' ಎಂಬುದು ಅದರ ಕನ್ನಡ ಅರ್ಥ. ಈ ಗಾದೆ ಹೇಗೆ ಹುಟ್ಟಿತು ಎಂಬ ಬಗ್ಗೆ ಒಂದು ಚಿಕ್ಕ ಕತೆಯಿದೆ. ಒಂದು ಊರಿನಲ್ಲಿ ಒಬ್ಬ ಬ್ರಾಹ್ಮಣನಿದ್ದನು. ಅವನು ಪೌರೋಹಿತ್ಯ ಮಾಡಿ ತನ್ನ ಜೀವನವನ್ನು ಸಾಗಿಸುತ್ತಿದ್ದನು. ಅವನು ತನ್ನ ಊರಿನ ಸುತ್ತಮುತ್ತಲೂ ಇದ್ದ ಹಳ್ಳಿಗಳಿಗೆ ಹೋಗಿ ಪೌರೋಹಿತ್ಯ ಮಾಡಿ ಅವರು ಕೊಟ್ಟ ದವಸ ಧಾನ್ಯಗಳಿಂದ ತನ್ನ ಹಾಗೂ ತನ್ನ ಕುಟುಂಬದ ಪಾಲನೆ ಪೋಷಣೆ ಮಾಡುತ್ತಿದ್ದನು. ಒಂದು ದಿನ ಒಬ್ಬ ರೈತನು ಬ್ರಾಹ್ಮಣನಿಗೆ ಒಂದು ಎಮ್ಮೆಯನ್ನು ದಾನವಾಗಿ ನೀಡಿದನು.

ಎಮ್ಮೆ ತುಂಬಾ ದಷ್ಟಪುಷ್ಟವಾಗಿತ್ತು. ಆ ಎಮ್ಮೆಯನ್ನು ಹೊಡೆದುಕೊಂಡು ಬ್ರಾಹ್ಮಣನು ತನ್ನ ಊರಿನ ಕಡೆಗೆ ಸಾಗಿದ್ದನು. ದಾರಿಯಲ್ಲಿ ಒಬ್ಬ ಗೌಳಿಗನು ಆ ಬ್ರಾಹ್ಮಣನಿಗೆ ಭೇಟಿಯಾದನು. ಆ ಗೌಳಿಗನು ತುಂಬಾ ಬಲಶಾಲಿಯಾಗಿದ್ದು ಅವನ ಕೈಯಲ್ಲಿ ದಪ್ಪವಾದ ಒಂದು ದೊಣ್ಣೆ ಇತ್ತು. ಎಮ್ಮೆಯನ್ನು ನೋಡಿದ ಗೌಳಿಗನಿಗೆ ಅದರ ಮೇಲೆ ಮನಸಾಯಿತು. ಹೇಗಾದರೂ ಮಾಡಿ ಬ್ರಾಹ್ಮಣನಿಂದ ಆ ಎಮ್ಮೆಯನ್ನು ಪಡೆದುಕೊಳ್ಳಬೇಕೆಂಬ ದುರಾಸೆ ಉಂಟಾಯಿತು. ಅವನು ಬ್ರಾಹ್ಮಣನನ್ನು ಕುರಿತು 'ಜೋಯಿಸರೆ, ಎಮ್ಮೆ ಸಾಕುವಂತಹ ಶ್ರಮ ನಿಮಗೇಕೆ, ಅದು ನಮ್ಮ ಗೌಳಿಗರ ಕೆಲಸ ಅದನ್ನು ನನಗೆ ಕೊಟ್ಟು ಬಿಡಿ ನಾನು ಸಾಕಿಕೊಳ್ಳುತ್ತೇನೆ' ಎಂದು ಹೇಳಿದನು.

ಬ್ರಾಹ್ಮಣನು ಅದಕ್ಕೆ ಒಪ್ಪಲಿಲ್ಲ. 'ನನಗೆ ದಾನವಾಗಿ ಬಂದದ್ದನ್ನು ಇನ್ನೊಬ್ಬರಿಗೆ ಕೊಡುವಂತಿಲ್ಲ. ಆದ್ದರಿಂದ ಎಮ್ಮೆಯ ಆಸೆಯನ್ನು ನೀನು ಬಿಟ್ಟು ಬಿಡು' ಎಂದು ಹೇಳಿದನು. 'ಒಳ್ಳೆಯ ಮಾತಿನಿಂದ ಕೊಡದಿದ್ದರೆ ಪರಿಣಾಮ ನೆಟ್ಟಗಾಗಲಿಕ್ಕಿಲ್ಲ' ಎಂದು ಗೌಳಿಗನು ಗರ್ಜಿಸಿದನು. 'ಏನು ಮಾಡುವೆ' ಎಂದು ಬ್ರಾಹ್ಮಣನು ಕೇಳಿದನು. ಅದಕ್ಕೆ ಗೌಳಿಗನು 'ನನ್ನ ಕೈಯಲ್ಲಿರುವ ಈ ದೊಣ್ಣೆಯಿಂದ ನಿನ್ನ ತಲೆ ಬುರುಡೆಯನ್ನು ಸೀಳಿ ಎಮ್ಮೆಯನ್ನು ತೆಗೆದುಕೊಂಡು ಹೋಗುವೆ' ಎಂದು ಹೇಳಿದನು.

ಗೌಳಿಗನ ಮಾತನ್ನು ಕೇಳಿದ ಬ್ರಾಹ್ಮಣನು ಸ್ವಲ್ಪ ಅಧೀರನಾದನು. ಅವನು ತುಂಬಾ ಬಲಶಾಲಿ. ನನ್ನ ಎಮ್ಮೆಯನ್ನು ತೆಗೆದುಕೊಂಡು ಹೋಗುವುದಂತೂ ನಿಶ್ಚಿತ. ಅದನ್ನು ತಪ್ಪಿಸಲು ಏನಾದರೂ ಉಪಾಯ ಮಾಡಿ ಉಳಿಸಿಕೊಳ್ಳಬೇಕು ಎಂದು ನಿರ್ಧರಿಸಿದನು. ಅದೇ ಯೋಚನೆಯಲ್ಲಿ ಇದ್ದ ಅವನಿಗೆ ಕೂಡಲೇ ಒಂದು ಉಪಾಯ ಹೊಳೆಯಿತು. 'ಸರಿ, ಎಮ್ಮೆಯನ್ನು ನೀನು ತೆಗೆದುಕೊಂಡು ಹೋಗಬಹುದು. ಆದರೆ ಅದಕ್ಕೆ ಪ್ರತಿಯಾಗಿ ನೀನು ನನಗೆ ಏನನ್ನಾದರೂ ಕೊಡಬೇಕಲ್ಲ? ಬ್ರಾಹ್ಮಣರ ವಸ್ತುವನ್ನು ಹಾಗೆಯೇ ತೆಗೆದುಕೊಂಡು ಹೋದರೆ ನಿನಗೆ ಪಾಪ ತಟ್ಟುತ್ತದೆ' ಎಂದು ಹೇಳಿದನು.

ಅದಕ್ಕೆ ಗೌಳಿಗನು 'ಜೋಯಿಸರೆ ನಿಮಗೆ ಕೊಡಲು ನನ್ನ ಬಳಿ ಏನು ಇಲ್ಲವಲ್ಲ' ಎಂದು ಹೇಳಿದನು. 'ಪರವಾಗಿಲ್ಲ ನಿನ್ನ ಕೈಯಲ್ಲಿರುವ ಆ ದೊಣ್ಣೆಯನ್ನೇ ಕೊಟ್ಟು ಎಮ್ಮೆಯನ್ನು ತೆಗೆದುಕೊಂಡು ಹೋಗು' ಎಂದು ಬ್ರಾಹ್ಮಣನು ಹೇಳಿದನು. ಬ್ರಾಹ್ಮಣನ ಮಾತನ್ನು ಕೇಳಿದ ಗೌಳಿಗನಿಗೆ ಒಂದು ದೊಣ್ಣೆಯ ಬದಲಿಗೆ ಎಮ್ಮೆ ಸಿಗುತ್ತಿದೆಯಲ್ಲ ಎಂದು ತುಂಬಾ ಸಂತೋಷವಾಯ್ತು. ದೊಣ್ಣೆಯನ್ನು ಬ್ರಾಹ್ಮಣನ ಕೈಗೆ ಕೊಟ್ಟು ಎಮ್ಮೆಯನ್ನು ತೆಗೆದುಕೊಂಡು ಹೋಗಲು ಸಿದ್ಧನಾದನು.

ದೊಣ್ಣೆ ಕೈಗೆ ಬರುತ್ತಲೇ ಬ್ರಾಹ್ಮಣನು ಅದನ್ನು ಗೌಳಿಗನತ್ತ ಬೀಸುತ್ತ 'ಎಚ್ಚರ, ಎಮ್ಮೆಯನ್ನು ಮುಟ್ಟಿದರೆ ನಿನ್ನ ಮೈ ಮೂಳೆಗಳನ್ನು ಪುಡಿಪುಡಿ ಮಾಡಿಬಿಡುತ್ತೇನೆ' ಎಂದು ಗರ್ಜಿಸಿದನು. ಬ್ರಾಹ್ಮಣನು ದಷ್ಟಪುಷ್ಟನಾಗಿ ಇದ್ದುದರಿಂದ ಹೆದರಿದ ಗೌಳಿಗನು ಎರಡು ಹೆಜ್ಜೆ ಹಿಂದೆ ಸರಿದು 'ಏಕೇ ಜೋಯಿಸರೆ ದೊಣ್ಣೆಗೆ ಬದಲು ಎಮ್ಮೆ ಕೊಡುತ್ತೇನೆ ಎಂದು ನೀವೆ ಹೇಳಿದ್ದಿರಲ್ಲವೇ?' ಎಂದು ಕೇಳಿದನು.

'ಆಗ ದೊಣ್ಣೆ ನಿನ್ನ ಕೈಯಲ್ಲಿ ಇತ್ತು, ಆದ್ದರಿಂದ ಹಾಗೇ ಹೇಳಿದ್ದೆ. ಈಗ ದೊಣ್ಣೆ ನನ್ನ ಕೈಯಲ್ಲಿದೆ ಹಾಗಾಗಿ ಎಮ್ಮೆ ನನ್ನದು' ಎಂದು ಹೇಳಿ ಎಮ್ಮೆಯನ್ನು ಹೊಡೆದುಕೊಂಡು ಮುಂದೆ ಸಾಗಿದನು.

(ಮೂಲ: ಹಿಂದಿ ಜನಪದ ಕಥೆ)

